# ರಸಬಾಳ್ವೆಯ ಸವಿಗಾನ

**ತಮ್ಮ ಬದುಕಿನುದ್ದಕ್ಕೂ ಸಾಹಿತ್ಯ ಕೃಷಿ ಮಾಡಿದ್ದ ಬರಹಗಾರ್ತಿ ವಸುಮತಿ ಉಡುಪ ಅವರನ್ನು ಸತ್ಕರಿಸಿ ಸನ್ಮಾನಿಸಿದ್ದು, ಅವರೊಂದಿಗೆ ಒಡನಾಡಿದ್ದು ಮರೆಯಲಾರದ ಸವಿನೆನಪು..!**

**■ ಕೆ.ಆರ್. ಉಮಾದೇವಿ ಉರಾಳ**



ತೀರ್ಥಹಳ್ಳಿ ತಾಲ್ಲೂಕಿನ ಏಳನೇ ಸಾಹಿತ್ಯ ಸಮ್ಮೇಳನ ನೆರವೇರಿದ್ದು ಸಾಹಿತಿ ವಸುಮತಿ ಉಡುಪರವರ ಸರ್ವಾಧ್ಯಕ್ಷತೆಯಲ್ಲಿ. 2018ರ ಫೆಬ್ರುವರಿ ಮೂರರಂದು ತಾಲ್ಲೂಕಿನ ಕೋಣಂದೂರಿನಲ್ಲಿ ತುಂಬ ಯಶಸ್ವಿಯಾಗಿ ನೆರವೇರಿತು. ಸಮ್ಮೇಳನ ನೆರವೇರುವ ಪೂರ್ವದಲ್ಲಿ ಸಮ್ಮೇಳನಾಧ್ಯಕ್ಷರನ್ನು ಅವರ ನಿವಾಸಕ್ಕೇ ಹೋಗಿ ಆಹ್ವಾನಿಸುವುದು ಸಾಹಿತ್ಯ ಪರಿಷತ್ತಿನ ಒಂದು ಸಂಪ್ರದಾಯ. ಅದರಂತೆ ಮೈಸೂರಲ್ಲಿ ನೆಲೆಸಿರುವ ವಸುಮತಿ ಉಡುಪರವರನ್ನು ನಾವು ಸಂಪರ್ಕಿಸಿದ್ದೆವು. 'ಪರಿಷತ್ತಿನ ಪರವಾಗಿ ನೀವೆಲ್ಲಾ ಅಷ್ಟು ದೂರದಿಂದ ಇಲ್ಲಿಯವರೆಗೆ ಬರುವ ಶ್ರಮ ತೆಗೆದುಕೊಳ್ಳಬೇಡಿ. ನಾವು ದಂಪತಿ ತೀರ್ಥಹಳ್ಳಿಗೆ ಬಂದಾಗ ಅಲ್ಲಿರುವ ನನ್ನ ತಮ್ಮ ಡಾ.ಮುರಳೀಧರ ಕಿರಣಕೆರೆಯವರ ಮನೆಯಲ್ಲಿ ನೀವು ಈ ಔಪಚಾರಿಕ ಕಾರ್ಯಕ್ರಮ ನೆರವೇರಿಸಿದರಾಯಿತು' ಎಂದು ಹೇಳಿ ನಮ್ಮ ಹೊರೆಯನ್ನು ತಗ್ಗಿಸುವ ಔದಾರ್ಯ ತೋರಿದ್ದರು. ಅದರಂತೆಯೇ ಅವರನ್ನು ಸಾಂಪ್ರದಾಯಿಕವಾಗಿ ಆಹ್ವಾನಿಸಲಾಗಿತ್ತು.

ನಾಲ್ಕು ದಶಕಗಳಿಂದ ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡವರು ವಸುಮತಿಯವರು. ಕಥಾಸಂಕಲನಗಳು, ನೀಳ್ಗತೆಗಳು, ಕಾದಂಬರಿಗಳು, ಲಲಿತ ಪ್ರಬಂಧ, ಮಕ್ಕಳ ಸಾಹಿತ್ಯ, ನಾಟಕ, ಕವಿತೆ, ಪ್ರವಾಸ ಕಥನ ಎಂದು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮೌಲ್ಯಯುತ ಕೃತಿರಚನೆ ಮಾಡಿರುವವರು. ಜೀವನಾನುಭವದ ಅಭಿವ್ಯಕ್ತಿಯ ಸತ್ವಯುತ ಪಾತ್ರಗಳು, ಮಲೆನಾಡ ಭಾಷಾ ಸೊಗಡು, ಮಲೆನಾಡಿಗರ ಬದುಕಿನ ಚಿತ್ರಣ, ಪ್ರಕೃತಿ ಸೌಂದರ್ಯದ ಅನಾವರಣ ಇವೆಲ್ಲದರಲ್ಲೂ ತಮ್ಮದೇ ಸ್ವಂತಿಕೆಯ ಶೈಲಿಯಿಂದಾಗಿ ರಾಜ್ಯಾದ್ಯಂತ ತಮ್ಮದೇ ಆಪ್ತ ಓದುಗ ವಲಯವನ್ನು ಹೊಂದಿರುವವರು. ಇವರ ಕಥೆಗಳು ರೇಡಿಯೊ ನಾಟಕಗಳಾಗಿ ಪ್ರಸಾರವಾಗಿವೆ. ಅನ್ಯ ಭಾಷೆಗಳಿಗೆ ಅನುವಾದಗೊಂಡಿವೆ. ಮೃಗತೃಷ್ಣಾ ನಾಟಕ ಸತತವಾಗಿ ಮೂರು ಬಾರಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಈ ಎಲ್ಲ ಸಾಧನೆಗಳಿಗಾಗಿ ವಸುಮತಿಯವರಿಗೆ ಹಲವಾರು ಸಾಹಿತ್ಯಕ ಪುರಸ್ಕಾರಗಳು ಸಂದಿವೆ.

ಲೇಖಕಿ ತೀರ್ಥಹಳ್ಳಿಯಲ್ಲಿ ಆಗ ಲಭ್ಯವಿದ್ದ ವಿದ್ಯಾಭ್ಯಾಸ ಸೌಕರ್ಯದಂತೆ ಪಿಯುಸಿಗೆ ಸಮನಾದ ಹನ್ನೊಂದನೇ ತರಗತಿಯವರೆಗೆ ಓದಿದರು. ಮುಂದೆ ಓದಬೇಕೆಂಬ ಅಪಾರವಾದ ಹಂಬಲವಿದ್ದರೂ ಓದುವುದಾಗಿರಲಿಲ್ಲ. ಓದು ಮುಗಿಸಿದ ಒಂದೆರಡು ವರ್ಷಗಳಲ್ಲೇ ಇದೇ ತಾಲ್ಲೂಕಿನವರಾಗಿ ಶಿವಮೊಗ್ಗ ಡಿ.ವಿ.ಎಸ್. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ ಪಾಂಡುರಂಗ ಉಡುಪರೊಂದಿಗೆ ವಿವಾಹ ನೆರವೇರಿತ್ತು. ಸಾಹಿತ್ಯಾಭಿರುಚಿ, ಹಾಸ್ಯಪ್ರಜ್ಞೆ, ವಾಗ್ಮಿತೆಯಿಂದ ಜನಪ್ರಿಯರಾಗಿದ್ದವರು ಪಾಂಡುರಂಗ ಉಡುಪರು. 1970ರಲ್ಲಿ ನಾನು ತೀರ್ಥಹಳ್ಳಿಯ ತುಂಗಾ ಕಾಲೇಜಿನಲ್ಲಿ ಓದುತ್ತಿದ್ದಾಗ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಗೆ ಇನ್ನೂ ನಾಲ್ವರು ಸ್ಪರ್ಧಾಳುಗಳೊಂದಿಗೆ ಇವರ ಕಾಲೇಜಿಗೆ ಹೋಗಿದ್ದೆ. ಸ್ಪರ್ಧೆಗಳು ಮುಗಿದ ನಂತರ ನಮ್ಮನ್ನೆಲ್ಲ ಕಾಲೇಜಿನ ಕ್ಯಾಂಟೀನಿಗೆ ಕರೆದುಕೊಂಡು ಹೋಗಿ ಚೌಚೌ ಮೈಸೂರುಪಾಕ್ ಕಾಫಿ ಕೊಡಿಸಿದ್ದರು. ತಿಂಡಿ ತಿನ್ನುತ್ತಿರುವಾಗ ಹಾಸ್ಯ ಚಟಾಕಿ ಹಾರಿಸುತ್ತಾ ಪ್ರೀತಿಯಿಂದ ನಮ್ಮನ್ನೆಲ್ಲ ಮಾತನಾಡಿಸುತ್ತಿದ್ದ ಅವರ ಪರಿಗೆ ಮೆಲ್ಲುತ್ತಿದ್ದ ತಿಂಡಿಯ ಸವಿರುಚಿ ಮತ್ತಷ್ಟು ಹೆಚ್ಚಾದಂತೆನಿಸಿತ್ತು.

ಲೇಖಕಿಯ ಸಹಜ ಪ್ರತಿಭೆ ಅಂತಹ ಉನ್ನತ ಅಭೀಪ್ಸೆಗೆ ಪ್ರೇರಕವಾಗಿತ್ತು. ಪತ್ನಿಯ ಯಶೋಗಾಥೆಗೆ ಮನಸಾರೆ ಆನಂದಿಸುವ ಪತಿಯ ಸೌಹಾರ್ದತೆ, ಇಂಥ ಸಾಮರಸ್ಯದ ರಸಬಾಳ್ವೆಯ ದಾಂಪತ್ಯ ಕೂಡ ವಸುಮತಿ ಉಡುಪರ ಅವಿರತ ಲೇಖನ ವ್ಯವಸಾಯದ ಯಶಸ್ಸಿನ ಕಾರಣಗಳಲ್ಲೊಂದಾಗಿರುತ್ತದೆ ಎನಿಸಿತು. ■